# <u>ನಗರಸಭೆ ಕಾರ್ಯಾಲಯ, ರಾಮನಗರ.</u>

ನಂ: ವಿಶೇಷ ಸಭೆ /3/08-09 ದಿನಾಂಕ : 28-02-09.

ದಿನಾಂಕ: 28-02-2009 ರಂದು ಪೂರ್ವಾಹ್ನ 11.00 ಘಂಟೆಗೆ ನಗರಸಭೆಯ ಪ್ರಶಸ್ತಿ ಭವನದಲ್ಲಿ ಶ್ರೀ. ಸೋಮಶೇಖರ್ ರಾವ್ ಅಧ್ಯಕ್ಷರು ನಗರಸಭೆ ರಾಮನಗರ ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯ ನಡವಳಿಗಳು.

ಹಾಜರಿ - 31 ಗೈರುಹಾಜರಿ- 05 ಒಟ್ಟು –36

**<u>ವಿಷಯ-154</u>**. 2008-09 ನೇ ಸಾಲಿನ ಪರಿಷ್ಕೃತ ಆಯ - ವ್ಯಯ ಮತ್ತು 2009-10 ನೇ ಸಾಲಿನ ಅಂದಾಜು ಅಯ -ವ್ಯಯವನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.

**<u>ತೀ. 154</u>**. ಸಭೆಯ ಪ್ರಾರಂಭಕ್ಕೆ ಪೌರಾಯುಕ್ತರು ಸಭೆಗೆ ಆಗಮಿಸಿದ ಅಧ್ಯಕ್ಷರು ಸದಸ್ಯರು, ಹಾಗೂ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ. ನಆಇ/125/ಎಂ.ಎಲ್ ಆರ್/2008 /(ಎ20) ದಿನಾಂಕ. 19-02-2009 ರ ಮೂಲಕ ಈ ನಗರಸಭೆಗೆ ನೇಮಕ ಮಾಡಲಾದ ನಾಮ ನಿರ್ದೇಶನ ಸದಸ್ಯರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು. ಪತ್ರಕರ್ತರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸುವಂತೆ ಅಧ್ಯಕ್ಷರನ್ನು ಕೋರಿದರು . ನಂತರ ಅಧ್ಯಕ್ಷರು 2008-09 ನೇ ಸಾಲಿನ ಪರಿಷ್ಕೃತ ಆಯ - ವ್ಯಯ ಅಂದಾಜು ಮತ್ತು 2009-10 ನೇ ಸಾಲಿನ ಅಯ - ವ್ಯಯ ಮುಂಗಡ ಪತ್ರವನ್ನು ಸಭೆಗೆ ಸೂದೀರ್ಘವಾಗಿ ಮಂಡಿಸಿದರು.

ಆಯ-ವ್ಯಯ ಸಾರಾಂಶ ತ:ಖ್ತೆ 2009-10

| NAME : U L B - RAMANAGARA<br>(ರೂ. ಸಾವಿರಗಳಲ್ಲಿ) | | | | | | | |
|---|---|---|---|---|---|---|---|
| ಕ್ರ. ಸಂ Sl. No. | ವಿವರ PARTICULARS | ಕೋಡ್ CODE | ಹಿಂದಿನ ವರ್ಷದ ವಾಸ್ತವಿಕ ಲೆಕ್ಕ Actuals for the previous year 2007-08 (ರೂ) | ಪ್ರಸಕ್ತ ವರ್ಷದ ಆಯ-ವ್ಯಯ ಅಂದಾಜು Budget Estimate for the current year 2008-09 (ರೂ) | ಪ್ರಸಕ್ತ ವರ್ಷದ ಡಿಸೆಂಬರ್ ಮಾಹೆಯವರೆಗಿನ ವಾಸ್ತವಿಕ ಲೆಕ್ಕ Actuals upto December of the current year 2008-09 (ರೂ) | ಪ್ರಸಕ್ತ ವರ್ಷದ ಪರಿಷ್ಕೃತ ಆಯ-ವ್ಯಯ ಅಂದಾಜು Revised Budget Estimate for the current Year 2008-09 (ರೂ) | ಆಯ-ವ್ಯಯ ಅಂದಾಜು Budget Estimate for 2009-10 (ರೂ) |
| 1 | 2 | 3 | 4 | 5 | 6 | 7 | 8 |
| A | **ಆರಂಭಿಕ ಶುಲ್ಕ OPENING BALANCE** | | | | | | |
| | Cash & Bank balances (Major Code 47) | | 50031.8 | 50763.67 | 104,420.80 | 104,420.80 | 61,734.55 |
| B | **ರಾಜಸ್ವ ಖಾತೆ REVENUE ACCOUNT** | | | | | | |
| B1 | ರಾಜಸ್ವ ಆದಾಯಗಳು REVENUE RECEIPTS | | 88,112.94 | 116,076.00 | 72,348.70 | 104,695.00 | 88,628.00 |
| B2 | ರಾಜಸ್ವ ಪಾವತಿಗಳು REVENUE PAYMENTS | | 43,676.49 | 69,840.00 | 27,161.04 | 50,771.00 | 57,983.00 |
| | **ಹೆಚ್ಚುವರಿ - ಕೊರತೆ SURPLUS/DEFICIT** | | 44,436.45 | 17803.00 | 45,187.66 | 53,924.00 | 30,645.00 |
| C | **ಬಂಡವಾಳ ಖಾತೆ CAPITAL ACCOUNT** | | | | | | |
| C1 | ಬಂಡವಾಳ ಆದಾಯಗಳು CAPITAL RECEIPTS | | 49878.91 | 411576.00 | 33985.00 | 94075.00 | 180850.00 |
| C2 | ಬಂಡವಾಳ ಪಾವತಿಗಳು CAPITAL PAYMENTS | | 88719.70 | 404016.00 | 79853.88 | 130390.00 | 215150.00 |
| | **ಹೆಚ್ಚುವರಿ - ಕೊರತೆ SURPLUS/DEFICIT** | | -38840.79 | -40165.00 | -45868.88 | -36315.00 | -34300.00 |
| D | **ವಿಶೇಷ ಖಾತೆ EXTRA ORDINARY ACCOUNT** | | | | | | |

| | | | | | | | |
|---|---|---|---|---|---|---|---|
| D1 | ವಿಶೇಷ ಆದಾಯಗಳು | | 139240.45 | 299999.00 | 58498.32 | 62370.00 | 203000.00 |
| D2 | ವಿಶೇಷ ಪಾವತಿಗಳು | | 90447.11 | 420970.00 | 55905.53 | 122665.25 | 193370.00 |
| | **Cash Surplus/(deficit) on Extraordinary Account** | | 48793.34 | -8682.00 | 2592.79 | -60295.25 | 9630.00 |
| F | **BALANCE [ A+E]** | | 104,420.80 | 19,719.67 | 106,332.37 | 61,734.55 | 67,709.55 |

ನಂತರ ಸಭೆಯು 2009-10 ನೇ ಸಾಲಿನ ಆಯ ವ್ಯಯವನ್ನು ಪರಿಶೀಲಿಸಿ ಅಧ್ಯಕ್ಷರು ಮಂಡಿಸಿದ ಅಯ - ವ್ಯಯ ಮುಂಗಡ ಪತ್ರವನ್ನು ಶ್ಲಾಘಿಸಿ ಸದರಿ ಮುಂಗಡ ಪತ್ರದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಕೆಳಕಂಡ ಬಾಬುಗಳನ್ನು ಅಯ - ವ್ಯಯದಲ್ಲಿ ಅಳವಡಿಸಿಕೊಳ್ಳಲು ಕೋರಿದರು.

1. ಸದಸ್ಯರಾದ ಶ್ರೀ. ಮುಕುಂದರಾಜ್ ಮತ್ತು ನಾಗೇಶ್ ರವರು ಮಾತನಾಡಿ ಬೇಸಿಗೆ ಕಾಲ ಸಮೀಪಿಸುತ್ತಿರುವುದರಿಂದ ಟ್ಯಾಂಕರ್ ಮೂಲಕ ನೀರು ತೊಂದರೆ ಇರುವ ಕಡೆ ಸರಬರಾಜು ಮಾಡಲು ಅಯ - ವ್ಯಯದಲ್ಲಿ ಅಳವಡಿಸಿಕೊಳ್ಳಲು ಕೋರಿದರು.
2. ಸದಸ್ಯರಾದ ಶ್ರೀ. ಚಿಕ್ಕವೀರೇಗೌಡರವರು ಮಾತನಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಬಿ.ಪಿ.ಎಲ್ ಗೆ ಒಳಪಡುವ ಕುಟುಂಬಗಳು ಮರಣ ಹೊಂದಿದಂತ ಸಮಯದಲ್ಲಿ ಶವಸಂಸ್ಕಾರಕ್ಕೆ ನಗರಸಭೆಯಿಂದ ರೂ. 2000-00 ಸಹಾಯಧನ ನೀಡಲು ಅಯ - ವ್ಯಯದಲ್ಲಿ ಲಅಳವ ಡಿಸಿಕೊಳ್ಳಲು ತಿಳಿಸಿದರು.
3. ಪೌರ ಕಾರ್ಮಿಕರಿಗೆ ಪೌರಕಾರ್ಮಿಕರ ಆರೋಗ್ಯ ದೃಷ್ಟಿಯಿಂದ ಅಸ್ಪತ್ರೆ ಖರ್ಚನ್ನು ಭರಿಸಲು ಅಯ - ವ್ಯಯದಲ್ಲಿ ಅಳವಡಿಸಿಕೊಳ್ಳಲು ಕೋರಲಾಯಿತು.
4. ಹಿರಿಯರಿಗೆ ಪ್ರಾತಿನಿಧ್ಯ ನೀಡಲು ಅಯ - ವ್ಯಯ ಅಳವಡಿಸಿಕೊಳ್ಳಲು ಕೋರಿದರು.
5. ಬಿ.ಪಿ.ಎಲ್ ಕುಟುಂಬದವರಿಗೆ ಹೆರಿಗೆ ಭತ್ಯೆ ಮತ್ತು ಕಿಟ್ ವಿತರಿಸಲು ಅಯ - ವ್ಯಯದಲ್ಲಿ ಅಳವಡಿಸಿಕೊಳ್ಳಲು ತಿಳಿಸಿದರು.
6. ಸದಸ್ಯರಾದ ಶ್ರೀ. ಉಮೇಶ್ ರವರು ಮಾತನಾಡಿ ನಗರವು ಬೆಳೆದಿದ್ದು , ನಗರಸಭೆಯ ಪೌರಾಯುಕ್ತರು ಸಂಚರಿಸಲು ಒಂದು ವಾಹನ ಮಾತ್ರ ಹೊಂದಿದ್ದು, ಅಧ್ಯಕ್ಷರಿಗೆ ಒಂದು ಕಾರನ್ನು ಖರೀದಿಸಲು ಅಯ - ವ್ಯಯದಲ್ಲಿ ಅಳ ವಡಿಸಿಕೊಳ್ಳಲು ತಿಳಿಸಿದರು.
7. ಲೋಕಸಭಾ ಸದಸ್ಯರಿಂದ 25.00 ಲಕ್ಷ ಅನುಧಾನವನ್ನು ನಿರೀಕ್ಷಿಸುವುದೆಂದು ಸದರಿ ಹಣವನ್ನು ಬರಿಯಲ್ ಗ್ರೌಂಡ್ ಕಾಂಪೌಂಡ್ ನಿರ್ಮಾಣಕ್ಕೆ ಅಳವಡಿಸಿಕೊಳ್ಳುವುದೆಂದು ತಿಳಿಸಿದರು.
8. ಕು. ಸಿಂಧು ವಾಯ್ಕರ್ ಮಾತನಾಡಿ ಅಯ - ವ್ಯಯದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲು ಕೋರಿದರು.
9. ಸದಸ್ಯರಾದ ಕು. ಮಂಗಳರವರು ಮಾತನಾಡಿ ಅಂಗನವಾಡಿಗಳಿಗೆ ಶೈಕ್ಷಣಿಕವಾಗಿ ಪ್ರೋತ್ಸಾಹ ನೀಡಲು ಅಯ - ವ್ಯಯದಲ್ಲಿ ಅಳವಡಿಸಿಕೊಳ್ಳಲು ಕೋರಿದರು.
10. ಸದಸ್ಯರಾದ ಶ್ರೀ. ಸೈ. ಉಮರ್ ರವರು ಮಾತನಾಡಿ ರೆವಿನ್ಯೂ ಖರ್ಚನ್ನು ಕಡಿಮೆ ಮಾಡಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಾಗೂ ಸ್ವಚ್ಛತೆಗೆ ಹೆಚ್ಚು ಒತ್ತು ನೀಡಲು ತಿಳಿಸಿದರು. ಹಿಂದಿನ ವರ್ಷದ ಬಜೆಟ್ ನಲ್ಲಿ ಮುಸ್ಲಿಂ ಬಾಂಧವರಿಗೆ ಈದ್ಗಾ ಮೈದಾನಕ್ಕಾಗಿ ಜಮೀನು ಖರೀದಿಸಲು ರೂ.

20.00 ಲಕ್ಷಗಳನ್ನು ಅಳವಡಿಸಿಕೊಳ್ಳಲಾಗಿತ್ತು. ಜಮೀನು ಖರೀದಿ ಸಾಧ್ಯ ವಾಗದ ಮಾತಾಗಿದ್ದು, ಕಾಂಪೌಂಡ್ ನಿರ್ಮಿಸಿಕೊಳ್ಳಲು ಅಯ - ವ್ಯಯದಲ್ಲಿ ಅಳವಡಿಸಿಕೊಳ್ಳಲು ಕೋರಿದರು.

11. ಸದಸ್ಯರಾದ ಶ್ರೀ. ಮಹ್ಮದ್ ಆರೀಫ್ ಖುರೇಶಿ ಮಾತನಾಡಿ ರಾಮನಗರ ಒಂದು ಸಿಲ್ಕ್ ಸಿಟಿಯಾಗಿದ್ದು, ಈಗ ಸದರಿ ಉದ್ದಿಮೆ ಬಿದ್ದು ಹೋಗಿರುವುದರಿಂದ ಅದರ ಏಳಿಗೆಗಾಗಿ ಅಯ - ವ್ಯಯದಲ್ಲಿ ಪ್ರಾತಿನಿದ್ಯ ಕೊಡಬೇಕೆಂದು ಕೋರಿದರು.

12. ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ. ಶಿವಕುಮಾರಸ್ವಾಮಿ ರವರು ಮಾತನಾಡಿ ಅಧ್ಯಕ್ಷರು ಮಂಡಿಸಿರುವ ಅಯ - ವ್ಯಯ ಉತ್ತಮವಾಗಿದೆ ಎಂದು ತಿಳಿಸಿ ಸಾಂಸ್ಕೃತಿಕ ಚಟುವಟಿಕೆ ಗಳಿಗೆ, ಚಾಮುಂಡೇಶ್ವವರಿ ಹಬ್ಬ ಮತ್ತು ಉರಸ್ ಗೆ ಹಣ ಕಾಯ್ದಿರಿಸಲು ಕೋರಿದರು. ಕೆಲವು ಬೋರ್ ವೆಲ್ ಗಳನ್ನು ಕೆ.ಯು.ಡಬ್ಲ್ಯೂ ಎಸ್ ಅಂಡ್ ಡಿ.ಬಿ. ರವರು ಬಂದ್ ಮಾಡಿದ್ದು, ಈಗ ಬೇಸಿಗೆ ಕಾಲ ವಾದ್ದರಿಂದ ಪುನಶ್ಚೇತನಗೊಳಿಸಲು ಅಯ -ವ್ಯಯದಲ್ಲಿ ಅಳವಡಿಸಿಕೊಳ್ಳಲು ಕೋರಿದರು. ರಾಷ್ಟ್ರ ನಾಯಕರು ಪ್ರತಿಮೆ ಸ್ಥಾಪಿಸಲು ಅಯ - ವ್ಯಯದಲ್ಲಿ ಅಳವಡಿಸಿಕೊಳ್ಳಲು ಕೋರಿ ಶೇ. 18 ರ ಬಾಬಿನಲ್ಲಿ ಈ ಬಾರಿಯಾದರು ಎಸ್ ಸಿ , ಎಸ್ ಟಿ ಫಲಾನುಬವಿಗಳಿಗೆ ಅಂಬೇಡ್ಕರ್ ಭವನದಲ್ಲಿ ಕಂಪ್ಯೂಟರ್ ಕೇಂದ್ರ ತೆರೆಯಲು ಕೋರಿದರು.

13. ಶ್ರೀ. ಕೃಷ್ಣಗೋಪಾಲ್, ನಾಮ ನಿರ್ದೇಶನ ಸದಸ್ಯರು ಮಾತನಾಡಿ ಸದಸ್ಯರುಗಳು ಜನ ಪ್ರತಿನಿದಿಗಳಾಗಿದ್ದು, ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಅಗತ್ಯವಾಗಿ ಮೊಬೈಲ್ ನ್ನು ಉಪಯೋಗಿಸುವುದರಿಂದ ಮಾಹೆಯಾನ ಪ್ರತಿ ಸದಸ್ಯರಿಗೆ ರೂ. 500-00 ಗಳ ಕರೆನ್ಸಿ ಕೊಡಿಸಿಕೊಡಲು ಕೋರಿದರು.

14. ಶ್ರೀ. ಸೋಮಶೇಖರ್ (ಮಣಿ) ನಾಮ ನಿರ್ದೇಶನ ಸದಸ್ಯರು ಮಾತನಾಡಿ ಶಿಥಿಲವಾಗಿರುವ ದೇವಸ್ಥಾನಗಳ ಜೀರ್ಣೋದ್ದಾರ ಮತ್ತು ಸಮುಧಾಯ ಭವನಗಳನ್ನು ಮೇಲ್ದರ್ಜೆಗೆ ಏರಿಸಲು ಅಯ - ವ್ಯಯದಲ್ಲಿ ಅಳವಡಿಸಿಕೊಳ್ಳಲು ಕೋರಿದರು.

ನಂತರ ಸಭೆಯು ಚರ್ಚಿಸಿ ಮೇಲಿನ ಸದಸ್ಯರುಗಳ ಅಭಿಪ್ರಾಯದಂತೆ ಸಾರ್ವಜನಿಕ ಹಿತದೃಷ್ಟಿಯಿಂದ ಕೆಳಕಂಡಂತೆ ಹಲವು ಯೋಜನೆಗಳನ್ನು ಆಯ - ವ್ಯಯದಲ್ಲಿ ಅಳ ವಡಿಸಿಕೊಳ್ಳಲಾಯಿತು.

**<u>ಜಮೆಗಳು</u>** 1) ಆಸ್ತಿ ತೆರಿಗೆ ಜಮ ರೂ. 100.00 ಲಕ್ಷ ದಿಂದ 125.50 ಲಕ್ಷಗಳಿಗೆ ಹೆಚ್ಚಿಸಲಾಯಿತು.
ಲೋಕಸಭಾ ಸದಸ್ಯರ ಅನುದಾನ (ಸ್ವಿಕೃತಿ ) ರೂ. 25.00. ಲಕ್ಷ

**<u>ಖರ್ಚು</u>**

| | |
|---|---|
| 1. ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು | ರೂ. 1.00 ಲಕ್ಷ |
| 2. ಬಿ.ಪಿ.ಎಲ್ ಕುಟುಂಬದಲ್ಲಿ ಮೃತರಾದವರ ಶವಸಂಸ್ಕಾರಕ್ಕೆ (2000-00 ರೂ.ನಂತೆ) | ರೂ. 1.00 ಲಕ್ಷ |
| 3. ಕಾರು ಖರೀದಿಸಲು | ರೂ. 1.00 ಲಕ್ಷ |
| 4. ಅಧ್ಯಕ್ಷರು ಮತ್ತು ಸದಸ್ಯರಿಗೆ ಕರೆನ್ಸಿ ಖರೀದಿಸಿಕೊಡಲು | ರೂ. 1.00 ಲಕ್ಷ |

5. ಹಿರಿಯ ನಾಗರೀಕರ ಕಲ್ಯಾಣ ಅಭಿವೃದ್ಧಿಗಾಗಿ ರೂ. 0.50 ಲಕ್ಷ

6. ಮಹಿಳೆಯರ ಕಲ್ಯಾಣ ಅಭಿವೃದ್ಧಿಗಾಗಿ ರೂ. 0.50 ಲಕ್ಷ

7. ಅಂಗವಿಕಲರ ಕಲ್ಯಾಣ ಅಭಿವೃದ್ಧಿಗಾಗಿ ರೂ. 0.50 ಲಕ್ಷ

8. ಬೀದಿ ನಾಯಿಗಳು ಕೋತಿಗಳು ಹಾಗೂ ಬೀದಿಯಲ್ಲಿ ಅಡ್ಡಾಡುವ ಕುದುರೆಗಳನ್ನು ಹಿಡಿದು ಸಾಗಿಸಲು ರೂ. 1.00 ಲಕ್ಷ

9. ಹಿಂದೂ ಮತ್ತು ಮುಸ್ಲಿಂ ಬರಿಯಲ್ ಗ್ರೌಂಡ್ ಕಾಂಪೌಂಡ್ ನಿರ್ಮಾಣ (ಲೋಕಸಭಾ ಸದಸ್ಯರ ಅನುದಾನದಿಂದ ರೂ. 25.00 ಲಕ್ಷ

10. ಯು.ಜಿ.ಡಿ ಸ್ವಚ್ಚತೆಗಾಗಿ ಕಂಪ್ಲೈಸರ್ (ಎಸ್.ಎಫ್,ಸಿ ಅನುದಾನದಿಂದ) ರೂ. 10.00 ಲಕ್ಷ

11. ಬೋರ್ ವೆಲ್ ಗಳು ಪುನಶ್ಚೇತನಗೊಳಿಸಲು ರೂ. 05.00 ಲಕ್ಷ

ನಂತರ ಸಭೆಯು ಅಂತಿಮವಾಗಿ ಅಯ - ವ್ಯಯವನ್ನು ಕೆಳಕಂಡಂತೆ ಸರ್ವಾನುಮತದಿಂದ ಅನುಮೋದಿಸಲಾಯಿತು.

# ನಗರಸಭೆ ಕಾರ್ಯಾಲಯ, ರಾಮನಗರ.

ನಂ: ವಿಶೇಷ ಸಭೆ /4/08-09 ದಿನಾಂಕ : 24-02-2009.

ದಿನಾಂಕ: 28-02-2009ರ ಶನಿವಾರ ಅಪರಾಹ್ನ 3.30 ಘಂಟೆಗೆ ನಗರಸಭೆಯ ಪ್ರಶಸ್ತಿ ಭವನದಲ್ಲಿ ಶ್ರೀ. ಸೋಮಶೇಖರ್ ರಾವ್ ಅಧ್ಯಕ್ಷರು ನಗರಸಭೆ ರಾಮನಗರ ರವರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆಯಲ್ಲಿ ನಡೆದ ಸಭೆಯ ನಡುವಳಿಗಳು.

ಹಾಜರಿ:–21+5 ಗೈರು ಹಾಜರಿ:–10 ಒಟ್ಟು:–31+5

ವಿ 155:– ರಾಮನಗರ ನಗರಸಭೆಗೆ 2008-09ನೇ ಸಾಲಿಗೆ ಬಿಡುಗಡೆಯಾಗಿರುವ ಎಸ್.ಎಫ್.ಸಿ ಅನುದಾನದಲ್ಲಿ ಬಿ.ಎಂ.ಮುಖ್ಯರಸ್ತೆಯಲ್ಲಿರುವ ಪ.ಜಾತಿ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಸೋಲಾರ್ ವಾಟರ್ ಹೀಟರ್ ಮತ್ತು ಸೋಲಾರ್ ಲೈಟ್ ಕಲ್ಪಿಸಲು ದಿನಾಂಕ : 21-01-2009 ರಂದು ಕರೆದಿದ್ದ ಪ್ರಕಟಣೆಗೆ ಪೂರಕವಾಗಿ ಬಂದಿರುವ ಕೋಟೇಷನ್ ಪರಿಶೀಲಿಸಿ ಅನುಮೋದಿಸುವ ವಿಚಾರ.

| ಕ್ರ. ಸಂ. | ಸರಬರಾಜುದಾರರು | ನಮೂದಿಸಿರುವ ಮೊತ್ತ |
|---|---|---|
| 1. | ಮೆ: ಸೆಲ್ಕೋ ಸೋಲಾರ್, ಎಲ್.ಐ.ಜಿ.ಹೆಚ್ ಟಿ ಪ್ರೈವೇಟ್ ಲಿ. | 5,98,519-00 |
| 2. | ಕಿರಣ್ ಮಾರ್ಕೆಟಿಂಗ್ ಬೆಂಗಳೂರು | 6,18,000-00 |

ತೀ 155:– ಬಂದಿರುವ ಟೆಂಡರ್ ಗಳನ್ನು ಪರಿಶೀಲಿಸಲಾಯಿತು ನಿಯಮಾವಳಿಗಳಂತೆ ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು ನಮೂದಿಸಿರುವ ದರಗಳನ್ನು ಪರಿಶೀಲಿಸಿ ಅನುಮೋದನೆ ನೀಡಲು ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಲು ತೀರ್ಮಾನ

1. ಬಿ. ಉಮೇಶ್ – ಸದಸ್ಯರು
2. ನಾಸಿರ್ ಆಲಿ ಬೇಗ್ – ಸದಸ್ಯರು
3. ಮಹಮದ್ದ್ ಆರಿಫ್ ಖುರೇಷಿ – ಸದಸ್ಯರು
4. ಸಿಂಧು ವಾಯ್ಕ್‌ರ್ – ಸದಸ್ಯರು
5. ಜೆ. ಮುಕುಂದರಾಜ್ – ಸದಸ್ಯರು

ಮುಂದುವರೆದಂತೆ ಸಮಿತಿಯ ದರ ಅನುಮೋದನೆ ನಂತರ ಜಿಲ್ಲಾಧಿಕಾರಿಗಳಿಗೆ ಟೆಂಡರ್ ಅನುಮೋದನೆಗಾಗಿ ಪ್ರಸ್ಥಾವನೆ ಸಲ್ಲಿಸಲು ತೀರ್ಮಾನ ಕೈಗೊಳ್ಳಲಾಯಿತು.

ವಿ 156:– 2009-10 ನೇ ಸಾಲಿಗೆ ಕಛೇರಿಗೆ ಅಗತ್ಯವಾದ

1. ಸ್ಟೇಷನರಿ
2. ಮುದ್ರಣ

**ಹೊರಗುತ್ತಿಗೆ ಮೂಲಕ**

3. ಡಾಟಾ ಎಂಟ್ರಿ ಆಪರೇಟರ್
4. ಸಹಾಯವಾಣಿ ನಿರ್ವಹಣೆ (24 ಘಂಟೆ)
5. ಸೆಕ್ಯೂರಿಟಿ ಸರ್ವೀಸ್ ಗಾಗಿ ಟೆಂಡರ್ ಕರೆದಿರುವುದನ್ನು ಅನುಮೋದಿಸುವ ವಿಚಾರ.

ತೀ 156:– ಸಭೆಯು ಟೆಂಡರ್ ಪ್ರಕ್ರಿಯೆಯನ್ನು ಪರಿಶೀಲಿಸಿತು ನಂತರ ಟೆಂಡರ್ ಕರೆದಿರುವುದನ್ನು ಅನುಸಮರ್ಥನಗೊಳಿಸಿದೆ.

ವಿ 157:– ನಗರಸಭೆ ರಾಮನಗರ ವ್ಯಾಪ್ತಿಯ ಕುಡಿಯುವ ನೀರಿನ ಟ್ಯಾಂಕರ್ ಮೂಲಕ ಕರ್ನಾಟಕನಗರ ನೀರು ಸರಬರಾಜು ಮಂಡಳಿ ಮೂಲಕ ಸರಬರಾಜು ಮಾಡುವ ಕುರಿತು ಚರ್ಚಿಸಿ ತೀರ್ಮಾನಿಸುವ ವಿಚಾರ.

ತೀ 157:– ಪ್ರಸ್ತುತ ನಗರಸಭೆ ವತಿಯಿಂದ ನಿರ್ವಹಣೆ ಮಾಡಲು ತೀರ್ಮಾನಿಸಲಾಯಿತು.

ವಿ 158:– ಘನತ್ಯಾಜ್ಯ ವಸ್ತು ನಿರ್ವಾಹಣೆ ವಿಭಾಗಕ್ಕೆ ಬ್ಲೀಚಿಂಗ್ ಪೌಡರ್ ಖರೀದಿಸಲು ಬಂದ ಕೊಟೇಷನ್ ಗಳನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀ 158:–. ದಿನಾಂಕ 5–1–09ರಂದು ಕರೆಯಲಾದ ಟೆಂಡರ್ ಪ್ರಕಟಣೆಗೆ ಮೂರು ಕೊಟೇಶನ್‌ಗಳು ಬಂದಿದ್ದು ವಿವರಿ ಕೆಳಕಂಡಂತಿದೆ.

| ಕ್ರ.ಸಂ | ವಿವರ | ಮಾರುತಿ ಎಂಟರ್ ಪ್ರೈಸಸ್ ಬೆಂಗಳೂರು | ಮೈಸೂರು ಕೆಮಿಕಲ್ ಅಂಡ್ ಮಾರ್ಕೆಟಿಂಗ್ ಕಂಪನಿ ಕುಣಿಗಲ್ | ವಿನಾಯಕ ಸೇಲ್ಸ್ ಕಾರ್ಪೋರೇಷನ್ ಬೆಂಗಳೂರು |
|---|---|---|---|---|
| 1 | ಬ್ಲೀಚಿಂಗ್ ಪೌಡರ್ 1 ಕೆ.ಜಿ ದರ | 25.75 ರೂ+ತೆರಿಗೆ | 23 ರೂ+ತೆರಿಗೆ | 25 ರೂ+ತೆರಿಗೆ |

ಮೇಲ್ಕಂಡಂತೆ ಅತಿ ಕಡಿಮೆ ದರ ನಮೂದಿಸಿದ ಮೈಸೂರು ಕೆಮಿಕಲ್ ಅಂಡ್ ಮಾರ್ಕೆಟಿಂಗ್ ಅವರ ಕಂಪನಿ ಕುಣಿಗಲ್ ರವರ ದರ ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

ವಿ 159:– 2008-09 ನೇ ಸಾಲಿನ ಎಸ್.ಎಫ್.ಸಿ (ಮುಕ್ತನಿಧಿ ) ಅನುದಾನ ಶೇ. 18 ರ ಯೋಜನೆಯ ಆರ್ಥೀಕ ಅಭಿವೃದ್ಧಿ ಕಾರ್ಯಕ್ರಮದ ಪ.ಜಾತಿ /ಪ. ಪಂಗಡದ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು 0.95 ಲಕ್ಷ ರೂ. ಗಳನ್ನು ಕಾಯ್ದಿರಿಸಲಾಗಿದ್ದು, ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಅಯ್ಕೆ

ತೀ 159:– ಆರ್ಥಿಕ ನೆರವು ಕೋರಿ ಕೆಳಕಂಡಂತೆ ಬಂದಿರುವ 7 ಅರ್ಜಿಗಳನ್ನು ಪರಿಶೀಲಿಸಲಾಯಿತು

| ಕ್ರ.ಸಂ | ಅರ್ಜಿದಾರರು | ಕೋರಿರುವ ಸಹಾಯವನ್ನು(ಸ್ವಯಂ ಉದ್ಯೋಗ) |
|---|---|---|
| 1 | ನರಸಿಂಹ ಬಿನ್ ಚಿಕ್ಕನರಸಯ್ಯ ನಂ.53 ತುರುಪಲಾಯ 20ನೇ ವಾರ್ಡ್ ರಾಮನಗರ | ಪೆಟ್ಟಿ ಅಂಗಡಿಗೆ ಬಂಡವಾಳ ಕೋರಿ |

| | | |
|---|---|---|
| 2 | ಎಸ್. ರೇವಣ್ಣ ಬಿನ್ ಶಿವಣ್ಣ ತುರುಪಲಾಯ 20ನೇ ವಾರ್ಡ್ ರಾಮನಗರ | ಅಂಗಡಿ ವ್ಯಾಪಾರಕ್ಕೆ ಬಂಡವಾಳ ಕೋರಿ |
| 3 | ಬೀರಸ್ವಾಮಿ ಬಿನ್ ಲೇ. ಜವರಯ್ಯ ಶೆಟ್ಟಿಹಳ್ಳಿ ಬೀದಿ ನಂ.190 9ನೇ ವಾರ್ಡ್ ರಾಮನಗರ | ಕೈಗಾಡಿ ವ್ಯಾಪಾರಕ್ಕೆ ಸಹಾಯ ಧನ ಕೊರಿ |
| 4 | ಸೋಮಶೇಖರ್ ಲೇಟ್ ಹೀರಯ್ಯ ತೋಪ್ ಖಾನ್ ಮೊಹಲ್ಲಾ ರಾಮನಗರ | ಪೆಟ್ಟಿ ಅಂಗಡಿ ನಡೆಸಲು ಸಹಾಯಧನ ಕೋರಿ |
| 5 | ವಿ. ರಮೇಶ್ ಬಿನ್ ವರದಯ್ಯ ಶೆಟ್ಟಿಹಳ್ಳಿ ಬೀದಿ ನಂ.4383 9ನೇ ವಾರ್ಡ್ ರಾಮನಗರ | ಪೆಟ್ಟಿ ಅಂಗಡಿ ನಡೆಸಲು |
| 6 | ಪ್ರಕಾಶ್ ಬಿನ್ ಬೋರಯ್ಯ ನಂ.3243 ಬಾಲಿಗೇರಿ 17ನೇ ವಾರ್ಡ್ ರಾಮನಗರ | ಕೈಗಾಡಿ ವ್ಯಾಪಾರ |
| 7 | ವಿ ಸೋಮಶೇಖರ್ ಬಿನ್ ವೆಂಕಟರಾಯಪ್ಪ ನಂ.343 ಕಾಯಿಸೊಪ್ಪಿನ ಬೀದಿ 5ನೇ ವಾರ್ಡ್ | ವೀಡಿಯೋ ಮತ್ತು ಪೋಟೋ ವ್ಯಾಪಾರ ಡಿಜಿಟಲ್ ಕ್ಯಾಮರಾ ಹಾಗೂ ತಾಂತಿಕ ಸಾಮಗ್ರಿಗೆ ಕೋರಿ |

ನಂತರ ಸಭೆಯು ಅರ್ಜಿ ಸಂಖ್ಯೆ(2) ಮತ್ತು (7)ರ ಶ್ರೀ ರೇವಣ್ಣ ಮತ್ತು ವಿ. ಸೋಮಶೇಖರ್ ರವರು ಸ್ವಯಂ ಉದ್ಯೋಗ ನಡೆಸುತ್ತಿರುವುದರಿಂದ ಹಾಗೂ ಹಾಜರುಪಡಿಸಿರುವ ದಾಖಲಾತಿ ಪ್ರಕರಣ ಇವರು ಅರ್ಹರಿರುವ ಕಾರಣ ಶ್ರೀ ರೇವಣ್ಣ ಬಿನ್ ಶಿವಣ್ಣ ಇವರಿಗೆ ಚಿಲ್ಲರೆ ಅಂಗಡಿ ವ್ಯಾಪಾರಕ್ಕೆ ಬಂಡವಾಳ ರೂಪಿಸಿಕೊಳ್ಳಲು ರೂ. 35,000–00 ಮತ್ತು ವಿ. ಸೋಮಶೇಖರ್ ಬಿನ್ ವೆಂಕಟರಾಯಪ್ಪರವರಿಗೆ ಸ್ಟುಡಿಯೋ ನಡೆಸಲು ಡಿಜಿಟಲ್ ಕ್ಯಾಮರ ಖರೀದಿಸಲು ರೂ. 60,000–00 ಗಳ ಸಹಾಧನ ಮಂಜೂರು ಮಾಡಬಹುದೆಂದು ಸಭೆಯು ಒಟ್ಟು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಈ ಮೊಬಲಗನ್ನು ಸಂಬಂಧಿಸಿದ ಫರ್ಮ್‌ರವರಿಗೆ ಪಾವತಿಸಲು ತೀರ್ಮಾನ ಕೈಗೊಳ್ಳಲಾಯಿತು.

ವಿ 160:– 2008–09ನೇ ಸಾಲಿನ ನಗರಸಭಾ ನಿಧಿ ಶೇ.18ರ ಯೋಜನೆಯಡಿ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮದಡಿ ನಗರಸಭಾ ವ್ಯಾಪ್ತಿಯಲ್ಲಿ ಬರುವ ಪ.ಜಾ/ಪ.ಪಂಗಡದವರ(ಬಿ.ಪಿ.ಎಲ್‌ಗೆ ಒಳಪಡುವ) 08–10ರ ವಯಸ್ಸಿನ ಹೆಣ್ಣು ಮಕ್ಕಳಿಗೆ 18 ವರ್ಷ ವಯೋಮಿತಿ ತುಂಬುವ ವರೆಗೆ ಒಂದು ಬಾರಿಗೆ 20,000–00ಗಳನ್ನು ಹೆಚ್ಚು ಗಳಿಕೆ ಬರುವ ಜೀವಾ ವಿಮೆಯಲ್ಲಿ ತೊಡಗಿಸಲು(ಒಂದು ಕುಟುಂಬಕ್ಕೆ ಒಬ್ಬರಿಗೆ ರೂ. 20,000–00 ದಂತೆ 8.65 ಲಕ್ಷ ರೂಗಳನ್ನು ಕಾಯ್ದಿರಿಸಲಾಗಿದೆ. ಅರ್ಹ ಪಲಾನುಭವಿಗಳನ್ನು ಆಯ್ಕೆ ಮಾಡುವ ವಿಚಾರ(ನಗರಸಭೆ ಸಾಮಾನ್ಯ ಸಭೆ ಠರಾವು ಸಂಖ್ಯೆ 144(1) ದಿ:22–1–09ರ ಪ್ರಕಾರ)

ತೀ 160:– ಮುಂದುವರಿಸಲಾಯಿತು

ವಿ 161:– 2009–10ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ ಅನುದಾನ ಶೇ.18ರ ಬಾಬಿಗೆ ಕಾದಿರಿಸಿರುವ ರೂ. 68.10 ಲಕ್ಷಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಅನುಮೋದಿಸುವ ವಿಚಾರ

ತೀ 161:– ಮುಂದುವರಿಸಲಾಯಿತು

ಸಹಿ:–
ಅಧ್ಯಕ್ಷರು,
ನಗರಸಭೆ, ರಾಮನಗರ.